# ಪಿಎಚ್. ಡಿ. ನಿಯಮಾವಳಿ

## ೧. ಪ್ರವೇಶಾರ್ಹತೆ

ಅ. ಯುಜಿಸಿಯಿಂದ ಅನುಮೋದನೆ ಪಡೆದ ವಿಶ್ವವಿದ್ಯಾಲಯಗಳಿಂದ ಸ್ನಾತಕೋತ್ತರ ಪದವಿಯಲ್ಲಿ ಶೇ. ೫೫ ಅಂಕ ಪಡೆದವರು ಪಿಎಚ್. ಡಿ. ಅಧ್ಯಯನಕ್ಕೆ ನೋಂದಣಿ ಮಾಡಿಕೊಳ್ಳಲು ಅರ್ಹರಾಗುತ್ತಾರೆ. ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಪ್ರವರ್ಗ ೧ಕ್ಕೆ ಸೇರಿದ ಅಭ್ಯರ್ಥಿಗಳಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಶೇ. ೫೦ ಅಂಕ ಪಡೆದವರು ನೋಂದಣಿ ಪಡೆಯಬಹುದು.

ಆ. ದಿನಾಂಕ ೩೧-೦೩-೧೯೯೨ ಕ್ಕೆ ಮೊದಲು ನೇಮಕಗೊಂಡಿದ್ದು, ನಿಯಮಿತ ಖಾಯಂ ಸೇವೆಯಲ್ಲಿರುವ ಕಾಲೇಜುಗಳಲ್ಲಿ ಪದವಿ ತರಗತಿಯ ಅಧ್ಯಾಪಕರು ಸ್ನಾತಕೋತ್ತರ ಪದವಿಯಲ್ಲಿ ಶೇ. ೫೦ ಅಂಕ ಪಡೆದಿದ್ದರೆ ಅವರು ನೋಂದಣಿಗೆ ಅರ್ಹರಾಗಿರುತ್ತಾರೆ.

ಇ. ಎನ್‌ಇಟಿ /ಎಸ್‌ಎಲ್‌ಇಟಿ/ಜಿಎಟಿಇ/ಜೆಆರ್‌ಎಫ್/ಎಂ.ಫಿಲ್. ಅಥವಾ ಎಫ್‌ಐಪಿ/ ಕ್ಯೂಐಪಿ ಕಾರ್ಯಕ್ರಮಗಳಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳಿಗೆ ಪ್ರವೇಶ ಪರೀಕ್ಷೆಯ ಅಗತ್ಯವಿಲ್ಲ. ಇದಲ್ಲದೆ ವಿಶೇಷವಾಗಿ ಅನುದಾನ ಪಡೆಯುತ್ತಿರುವ ಯೋಜನೆಗಳಲ್ಲಿ ಆಯ್ಕೆಯಾಗಿ ಕೆಲಸ ಮಾಡುತ್ತಿರುವ ಅಭ್ಯರ್ಥಿಗಳು ಹಾಗೂ ಸರ್ಕಾರವು ಪ್ರಾಯೋಜಿಸುವ ವಿದೇಶಿ ವಿದ್ಯಾರ್ಥಿಗಳು ಸಹ ಪ್ರವೇಶ ಪರೀಕ್ಷೆ ಬರೆಯುವ ಅಗತ್ಯವಿಲ್ಲ.

ಈ. ಮೇಲೆ ತಿಳಿಸಿರುವ ಅ/ಆ ನಿಯಮಗಳ ಪ್ರಕಾರ ಅರ್ಹತೆ ಪಡೆದವರು ಕೇಂದ್ರವು ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ಭಾಗವಹಿಸಿ ಆಯ್ಕೆಯಾಗಬೇಕು. ಅರ್ಹರ ಪಟ್ಟಿಯನ್ನು ಸಿದ್ಧಪಡಿಸುವಾಗ ಅಭ್ಯರ್ಥಿಯು ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳಲ್ಲಿ ಶೇ. ೫೦ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಪಡೆದ ಅಂಕಗಳಲ್ಲಿ ಶೇ. ೫೦ನ್ನು ಪರಿಗಣನೆಗೆ ತೆಗೆದುಕೊಂಡು ಒಟ್ಟಾಗಿ ಶೇ. ೫೫ ಅಂಕ ಬಂದವರನ್ನು ಮಾತ್ರ ಆಯ್ಕೆ ಮಾಡಲಾಗುತ್ತದೆ.

## ೨. ಅಧ್ಯಯನದ ವಿಷಯ

ಅಭ್ಯರ್ಥಿಯು ಸಂಶೋಧನೆಗೆ ಆರಿಸಿಕೊಳ್ಳುವ ವಿಷಯ ಕರ್ನಾಟಕದ ಕಲೆ, ಸಾಹಿತ್ಯ, ಸಂಸ್ಕೃತಿ, ಭಾಷೆ ಮತ್ತು ಸಮಾಜ, ಅಭಿವೃದ್ಧಿ ವಿಷಯಗಳಿಗೆ ಸಂಬಂಧಿಸಿರಬೇಕು. ಇದು ಕರ್ನಾಟಕಕ್ಕೆ ಸಂಬಂಧಿಸಿದ ವಿಷಯ ಮತ್ತು ಬೇರೊಂದು ವಿಷಯದ ತೌಲನಿಕ ಅಧ್ಯಯನ ಆಗಿರಬಹುದು.

ತಾತ್ಕಾಲಿಕ ನೋಂದಣಿಯಾದ ಆರು ತಿಂಗಳ ಒಳಗೆ ನಿರ್ದಿಷ್ಟ ಶೀರ್ಷಿಕೆ ಮತ್ತು ಪ್ರಬಂಧದ ವ್ಯಾಪ್ತಿ ಖಚಿತವಾಗಬೇಕು.

## ೩. ಮಹಾಪ್ರಬಂಧದ ಭಾಷೆ

ಅಭ್ಯರ್ಥಿಯು ಪ್ರಬಂಧವನ್ನು ಕನ್ನಡದಲ್ಲಿಯೇ ಬರೆಯಬೇಕು. ಅನಿವಾರ್ಯ ಸಂದರ್ಭದಲ್ಲಿವಿಶ್ವವಿದ್ಯಾಲಯದ ಅನುಮತಿ ಪಡೆದು ಇಂಗ್ಲಿಷ್‌ನಲ್ಲಿ ಬರೆಯಲು ಅವಕಾಶವಿದೆ. ಇಂಗ್ಲಿಷ್‌ನಲ್ಲಿ ಬರೆಯಲು ನೀಡುವ ಅನುಮತಿಯನ್ನು ಮಹಾಪ್ರಬಂಧದ ಕನ್ನಡ ಅನುವಾದವನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ಶರತ್ತಿನ ಮೇರೆಗೆ ನೀಡುವುದಾಗಿದೆ. ಅಂತಹ ಸಂದರ್ಭದಲ್ಲಿ ಅಧ್ಯಯನದ ವಿಷಯ ಮಾತ್ರ ಕರ್ನಾಟಕಕ್ಕೆ ಸಂಬಂಧಿಸಿರಬೇಕು.

## ೪. ಅರ್ಜಿ ಆಹ್ವಾನ ಮತ್ತು ಪ್ರವೇಶ ಪರೀಕ್ಷೆ

ಪ್ರತಿವರ್ಷ ಸಾಮಾನ್ಯವಾಗಿ ಜುಲೈ ಇಲ್ಲವೆ ಆಗಸ್ಟ್ ತಿಂಗಳಲ್ಲಿ ಅರ್ಜಿ ಆಹ್ವಾನಿಸಿ ಪ್ರವೇಶ ಪರೀಕ್ಷೆ ನಡೆಸಲಾಗುತ್ತದೆ. ಈ ಪರೀಕ್ಷೆಯು ವಿದ್ಯಾರ್ಥಿಗಳು ಎಂ. ಎ. ಗೆ ಓದಿದ, ಪಿಎಚ್. ಡಿ. ಗೆ ಆಯ್ದುಕೊಳ್ಳುವ ವಿಷಯಗಳ ಜ್ಞಾನ, ಭಾಷೆ, ಶೈಲಿ ಇತ್ಯಾದಿಗಳನ್ನು ಪರೀಕ್ಷಿಸುವ ರೀತಿಯದಾಗಿರುತ್ತದೆ. ಒಟ್ಟು ಅಂಕಗಳು ೧೦೦. ಇದರಲ್ಲಿ ೫೦ ಅಂಕಗಳು ಅವರ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯದ ಮೇಲಿನ ಪ್ರಶ್ನೆಗಳಿಗೆ ಇರುತ್ತದೆ. ೨೫ ಅಂಕಗಳಿಗೆ ವಿದ್ಯಾರ್ಥಿಗಳಿಗೆ ಆಯಾಯ ವಿಭಾಗಗಳು ಪಠ್ಯವನ್ನು ಸೂಚಿಸುತ್ತವೆ. ಆ ಪಠ್ಯದ ಮೇಲೆ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಉಳಿದ ೨೫ ಅಂಕಗಳಿಗೆ ಮೌಖಿಕ ಪರೀಕ್ಷೆ ಇರುತ್ತದೆ.

ಈ ಮೂರೂ ಪರೀಕ್ಷಾ ವಿಭಾಗಗಳಲ್ಲಿಯೂ ಅಭ್ಯರ್ಥಿಯು ಕನಿಷ್ಠ ಶೇ. ೫೦ ಅಂಕಗಳನ್ನು ಪಡೆಯಲೇಬೇಕು ಮತ್ತು ಒಟ್ಟಾರೆ ಮೂರೂ ಪರೀಕ್ಷಾ ವಿಧಾನದಿಂದ ಅಭ್ಯರ್ಥಿಯು ೧೦೦ ಅಂಕಗಳಲ್ಲಿ ಅರ್ಹತೆಗಾಗಿ ಕನಿಷ್ಠ ೫೫ ಅಂಕಗಳನ್ನು ಪಡೆಯಬೇಕು.

## ೫. ಅಧ್ಯಯನಾವಧಿ

ಪಿಎಚ್. ಡಿ. ಅಧ್ಯಯನಕ್ಕೆ ಕನಿಷ್ಟ ಅವಧಿ ನೋಂದಣಿ ದಿನಾಂಕದಿಂದ ನಾಲ್ಕು ವರ್ಷಗಳು. ಒಂದು ವರ್ಷ ಅವಧಿ ವಿಸ್ತರಣೆಗೆ ಅವಕಾಶವಿರುತ್ತದೆ. ವಿಸ್ತರಣೆಗೆ ಸಕಾರಣ ನೀಡಿ ಕುಲಪತಿ ಅವರಿಂದ ಅನುಮತಿ ಪಡೆಯುವುದು ಕಡ್ಡಾಯ.

## ೬. ತಾತ್ಕಾಲಿಕ ನೋಂದಣಿ

ಅ. ಅಧ್ಯಯನಕ್ಕೆ ಆಯ್ಕೆಯಾದವರು ತಮ್ಮ ಮಾರ್ಗದರ್ಶಕರನ್ನು ಆಯ್ದುಕೊಂಡು ಪ್ರಸ್ತಾವದೊಂದಿಗೆ ತಾತ್ಕಾಲಿಕ ನೋಂದಣಿ ಪತ್ರವನ್ನು ಸಲ್ಲಿಸಬೇಕು. ಅಭ್ಯರ್ಥಿಯು ತನ್ನ ಮಹಾಪ್ರಬಂಧದ ಶೀರ್ಷಿಕೆಯನ್ನು ಮತ್ತು ಮಾರ್ಗದರ್ಶಕರ ಹೆಸರನ್ನು ಅವರ ಸಹಿಯೊಂದಿಗೆ ನೋಂದಣಿ ಅರ್ಜಿಯಲ್ಲಿ ಸೂಚಿಸಬೇಕು. ಮಹಾಪ್ರಬಂಧದ ಪ್ರಕರಣಗಳನ್ನು ವಿಭಜಿಸಿ ವಿವರವಾದ ಸಾರಲೇಖವನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು. ಅಂತರ ಶಿಸ್ತೀಯ ಅಧ್ಯಯನ ಸಂದರ್ಭದಲ್ಲಿ ಮಾರ್ಗದರ್ಶಕರ ಒಪ್ಪಿಗೆಯೊಂದಿಗೆ ಸಹಮಾರ್ಗದರ್ಶಕರನ್ನು ಗೊತ್ತು ಮಾಡಿಕೊಳ್ಳಬಹುದು. ಅದಕ್ಕೆ ಸಹಮಾರ್ಗದರ್ಶಕರ ಒಪ್ಪಿಗೆ ಹಾಗೂ ಸಹಿ ಅಗತ್ಯ. ಈ ವಿವರಗಳನ್ನು ತುಂಬಿ ನೋಂದಣಿ ಅರ್ಜಿಯನ್ನು ಕೇಂದ್ರವು ಸೂಚಿಸುವ ದಿನಾಂಕದೊಳಗೆ ಕೇಂದ್ರಕ್ಕೆ ಸಲ್ಲಿಸಬೇಕು. ಕೇಂದ್ರವು ವಿಶ್ವವಿದ್ಯಾಲಯದ ಅಧ್ಯಯನಾಂಗಕ್ಕೆ ಕಳುಹಿಸಿಕೊಡುತ್ತದೆ. ಕನಿಷ್ಠ ಆರು ತಿಂಗಳುಗಳವರೆಗೆ ಅಭ್ಯರ್ಥಿಯು

ನೋಂದಣಿ ತಾತ್ಕಾಲಿಕವಾಗಿರುತ್ತದೆ. ಈ ಆರು ತಿಂಗಳುಗಳ ಅವಧಿಯಲ್ಲಿ ಅಭ್ಯರ್ಥಿಯು ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ಕೇಂದ್ರ ನಡೆಸುವ ಸಂಶೋಧನ ವಿಧಿ ವಿಧಾನಗಳು ಎಂಬ ದೂರಶಿಕ್ಷಣ ಕೋರ್ಸ್‌ನ್ನು ಕಡ್ಡಾಯವಾಗಿ ಮಾಡಬೇಕಾಗುತ್ತದೆ. ಪ್ರಮಾಣಪತ್ರವನ್ನು ಕೇಂದ್ರಕ್ಕೆ ಸಲ್ಲಿಸಬೇಕಾಗುತ್ತದೆ.

ಆ. ಕನ್ನಡ ವಿಶ್ವವಿದ್ಯಾಲಯದ ಅಧ್ಯಯನ ವಿಧಾನದ ವಿಶಿಷ್ಟತೆ, ಬಹುಶಿಸ್ತೀಯತೆ, ನಿರ್ಲಕ್ಷಿತ ಕ್ಷೇತ್ರ ಪ್ರಾಧಾನ್ಯತೆ ಹಾಗೂ ದೇಶೀಯ ದೃಷ್ಟಿಕೋನ ಮತ್ತು ಪ್ರಗತಿಪರ ದೃಷ್ಟಿಕೋನವನ್ನು ಸಂಶೋಧನ ಮಹಾಪ್ರಬಂಧ ಪ್ರತಿಬಿಂಬಿಸುವಂತೆ ದೂರ ಶಿಕ್ಷಣದಲ್ಲಿ ತರಬೇತಿ ನೀಡಲಾಗುತ್ತದೆ. ದೂರಶಿಕ್ಷಣ ಕೋರ್ಸ್‌ನ್ನು ಪೂರ್ಣಗೊಳಿಸಿದ ಅನಂತರ ಆ ಹಿಂದಿನ ಆರು ತಿಂಗಳ ಅವಧಿಗೂ ಪೂರ್ವಾನ್ವಯವಾಗುವಂತೆ ವಿಶ್ವವಿದ್ಯಾಲಯವು ಅಧಿಕೃತ ನೋಂದಣಿ ನೀಡುತ್ತದೆ.

ಇ. ಅವಶ್ಯವೆನಿಸಿದಲ್ಲಿ ಮಹಾಪ್ರಬಂಧದ ಶೀರ್ಷಿಕೆಯನ್ನು ವಿಷಯಕ್ಕೆ ಧಕ್ಕೆಯಾಗದಂತೆ ಮಾರ್ಗದರ್ಶಕರ ಸಮ್ಮತಿಯೊಂದಿಗೆ ಒಮ್ಮೆ ಮಾತ್ರ ಪರಿಷ್ಕರಿಸಿಕೊಳ್ಳಲು ಅವಕಾಶವಿರುತ್ತದೆ. ಮೊದಲಿನ ವಿಷಯ ಶೀರ್ಷಿಕೆಯನ್ನು ಕೈ ಬಿಟ್ಟು ಹೊಸ ವಿಷಯ ಹೊಸ ಶೀರ್ಷಿಕೆಯಿಂದ ಅಭ್ಯಾಸ ಮುಂದುವರಿಸಬೇಕೆನ್ನುವವರು ಮತ್ತೆ ಹೊಸತಾಗಿ ನೋಂದಣಿ ಮಾಡಿಕೊಳ್ಳಬೇಕಾಗುತ್ತದೆ.

## ೭. ಶುಲ್ಕಗಳು

ವಿಶ್ವವಿದ್ಯಾಲಯವು ನಿಗದಿಗೊಳಿಸುವ ರೂಪದಲ್ಲಿ ಶುಲ್ಕ ಸಂಗ್ರಹಿಸಲಾಗುವುದು. ಮಾತ್ರವಲ್ಲ, ಪ. ಜಾತಿ., ಪ.ಪಂಗಡ ಮತ್ತು ಪ್ರ. ೧ರ ಅಭ್ಯರ್ಥಿಗಳಿಗೆ ನಿಯಮಾನುಸಾರ ಶೇ. ೫೦ ರ ಶುಲ್ಕ ವಿನಾಯಿತಿಯಿರುತ್ತದೆ.

ಶುಲ್ಕಗಳನ್ನು ವಿ. ವಿ. ವು ಕಾಲದಿಂದ ಕಾಲಕ್ಕೆ ಪರಿಷ್ಕರಿಸಬಹುದಾಗಿದೆ.

## ೮. ಪ್ರಗತಿ ವರದಿ

ಅ. ಅಭ್ಯರ್ಥಿಯು ಪ್ರತಿ ಆರು ತಿಂಗಳಿಗೆ ಒಂದು ಸಲ (ಜನವರಿ ಮತ್ತು ಜುಲೈ) ಅಭ್ಯಾಸದ ಪ್ರಗತಿ ವರದಿಯನ್ನು ಮಾರ್ಗದರ್ಶಕರ ಶಿಫಾರಸ್ಸಿನೊಂದಿಗೆ ಕೇಂದ್ರಕ್ಕೆ ಸಲ್ಲಿಸಬೇಕು. ಈ ವರದಿಯನ್ನು ಕೇಂದ್ರವು ಅಧ್ಯಯನಾಂಗಕ್ಕೆ ಕಳುಹಿಸಿಕೊಡುತ್ತದೆ. ಅಭ್ಯರ್ಥಿಯು ಅರ್ಧವಾರ್ಷಿಕ ಪ್ರಗತಿ ವರದಿಯನ್ನು ಅನುಕ್ರಮವಾಗಿ ಎರಡು ಅವಧಿಗಳಿಗೆ ಸಲ್ಲಿಸದಿದ್ದಾಗ ಅಥವಾ ಸಲ್ಲಿಸಿದ ವರದಿ ಸಮಧಾನಕರವಾಗಿಲ್ಲದ ಸಂದರ್ಭದಲ್ಲಿ ವಿಶ್ವವಿದ್ಯಾಲಯವು ನೋಂದಣಿ ರದ್ದು ಮಾಡಬಹುದಾಗಿದೆ.

ಆ. ಅಭ್ಯರ್ಥಿಯು ಸಲ್ಲಿಸುವ ಪ್ರಗತಿ ವರದಿ ಕನಿಷ್ಟ ೧೦ ಪುಟಗಳಿಗೆ ಕಡಿಮೆಯಿಲ್ಲದಂತೆ ಕಡ್ಡಾಯವಾಗಿ ವಿಸ್ತೃತವಾದ ವರದಿ ಸಲ್ಲಿಸಬೇಕು. ಅಭ್ಯರ್ಥಿಯು ಅದುವರೆಗೆ ಕೈಗೊಂಡ ಅಧ್ಯಯನದ ಸಮರ್ಥನೆಯ ಸ್ವರೂಪದಲ್ಲಿ ಆ ವರದಿ ಇರಬೇಕು. ವರದಿಯನ್ನು ಸಲ್ಲಿಸಿದ ನಂತರ ಕೇಂದ್ರವು ನಿಗದಿಪಡಿಸುವ ಒಂದು ನಿರ್ದಿಷ್ಟ ದಿನದಂದು ಸಂಬಂಧಿಸಿದ ಎಲ್ಲಾ ಅಭ್ಯರ್ಥಿಗಳು ಕೇಂದ್ರಕ್ಕೆ ಬಂದು ಪ್ರಗತಿವರದಿಗಳ ಬಗ್ಗೆ ಚರ್ಚೆ ನಡೆಸಿ ಸಮರ್ಥಿಸಿಕೊಳ್ಳಬೇಕು.

## ೯. ಪ್ರಬಂಧ ಸಲ್ಲಿಸುವ ಕ್ರಮ

ಅ. ಅಭ್ಯರ್ಥಿಯು ತನ್ನ ಅಧ್ಯಯನ ಅವಧಿ ನಾಲ್ಕು ವರ್ಷ ಮುಗಿದ ಮೇಲೆ ಮತ್ತು ಅಂತಿಮ ಅವಧಿ ಮುಗಿಯುವ ಆರು ತಿಂಗಳು ಮೊದಲು ಮತ್ತು ಮಾರ್ಗದರ್ಶಕರ ಮೂಲಕ ಅರ್ಜಿಯೊಂದಿಗೆ ಪ್ರಬಂಧದ ಸಾರಲೇಖವನ್ನು ಆರು ಪ್ರತಿಗಳಲ್ಲಿ ಕೇಂದ್ರಕ್ಕೆ ನೀಡಿ ಪ್ರಬಂಧ ಸಲ್ಲಿಸಲು ಅನುಮತಿ ಕೇಳಬಹುದು.

ಆ. ಪ್ರತಿಯೊಬ್ಬ ಅಭ್ಯರ್ಥಿಯು ಪ್ರಬಂಧವನ್ನು ಅಂತಿಮವಾಗಿ ಸಲ್ಲಿಸುವ ಮೊದಲು ಕೇಂದ್ರದಲ್ಲಿ ಪ್ರಬಂಧಕ್ಕೆ ಸಂಬಂಧಿಸಿದ ಮೌಖಿಕ ಚರ್ಚೆಯನ್ನು ನಡೆಸಿ ತನ್ನ ಸಿದ್ಧತೆಯನ್ನು ದೃಢೀಕರಿಸಿಕೊಳ್ಳಬೇಕು. ಅಲ್ಲಿ ಅಭ್ಯರ್ಥಿಯು ತಾನು ಅಳವಡಿಸಿಕೊಂಡ ವೈಧಾನಿಕತೆ ಮತ್ತು ಕಲೆ ಹಾಕಿದ ಮಾಹಿತಿ ಬಗ್ಗೆ ವಿವರಣೆ ನೀಡಬೇಕು. ಪ್ರತಿಯೊಬ್ಬ ಅಭ್ಯರ್ಥಿಯೂ ಸಂಶೋಧನೆಯ ವಿಷಯ ಕುರಿತಂತೆ ಕನಿಷ್ಟ ಎರಡು ಪ್ರಕಟಣೆ ಬಗ್ಗೆ ದಾಖಲೆ ಒದಗಿಸಬೇಕು.

ಇ. ಪ್ರಬಂಧ ಸಲ್ಲಿಸಲು ಅನುಮತಿ ಪಡೆದ ಕನಿಷ್ಠ ಆರು ತಿಂಗಳೊಳಗೆ ಪ್ರತಿಯೊಬ್ಬ ಅಭ್ಯರ್ಥಿಯೂ ಮಾರ್ಗದರ್ಶಕರಿಗೆ ಪ್ರಬಂಧದ ಅಂತಿಮ ಏಳು ಪ್ರತಿಗಳನ್ನು ಸಲ್ಲಿಸಬೇಕು. ಮಾರ್ಗದರ್ಶಕರು ಅದನ್ನು ಕೇಂದ್ರದ ನಿರ್ದೇಶಕರಿಗೆ ಒಪ್ಪಿಸುತ್ತಾರೆ. ಕೇಂದ್ರವು ಅಧ್ಯಯನಾಂಗಕ್ಕೆ ಕಳುಹಿಸಿಕೊಡುತ್ತದೆ.

ಈ. ಪ್ರತಿಯೊಬ್ಬ ಅಭ್ಯರ್ಥಿಯು ತಾನು ಸಿದ್ಧ ಪಡಿಸಿದ ಪ್ರಬಂಧವು ಪಿಎಚ್. ಡಿ. ಗಾಗಿ ನಡೆಸಿದ ಅಧ್ಯಯನವೆಂದೂ, ಪಿಎಚ್. ಡಿ. ಅವಧಿಯಲ್ಲಿ ನಡೆಸಿದ ಅಧ್ಯಯನವೆಂದೂ ಮತ್ತು ಅದು ಯಾವುದೇ ಪದವಿ / ಡಿಪ್ಲೊಮಾ/ ಫೆಲೋಶಿಪ್ ಅಥವಾ ಅಂತಹ ಯಾವುದೇ ಶಿಕ್ಷಣದ ಭಾಗವಾಗಿಲ್ಲವೆಂದೂ ಮಾರ್ಗದರ್ಶಕರಿಗೆ ಪ್ರಮಾಣ ಪತ್ರ ಸಲ್ಲಿಸಬೇಕು. ಪ್ರಬಂಧದ ಜೊತೆಗೆ ಕೇಂದ್ರದಲ್ಲಿರುವ ಗ್ರಂಥಾಲಯದ ಗ್ರಂಥಪಾಲಕರಿಂದ ಬಾಕಿ ಪ್ರಮಾಣಪತ್ರವನ್ನು ಸಲ್ಲಿಸಬೇಕು.

ಉ. ಪ್ರಬಂಧವನ್ನು ಎರಡಕ್ಕಿಂತ ಹೆಚ್ಚು ಬಾರಿ ಸಲ್ಲಿಸಲು ಅಭ್ಯರ್ಥಿಗೆ ಅವಕಾಶವಿರುವುದಿಲ್ಲ.

ಊ. ಮೌಲ್ಯ ಮಾಪನಕ್ಕೆ ಸಂಬಂಧಿಸಿ ವಿಶ್ವವಿದ್ಯಾಲಯವು ಕಾಲಕಾಲಕ್ಕೆ ಜಾರಿಗೆ ತರುವ ನಿಯಮಗಳು ಅನ್ವಯವಾಗುತ್ತವೆ.

## ೧೦. ಮೌಖಿಕ ಪರೀಕ್ಷೆ

ಮೌಲ್ಯಮಾಪಕದಿಂದ ಅನುಕೂಲ ವರದಿ ಬಂದ ಮೇಲೆ ಮುಕ್ತ ಮೌಖಿಕ ಪರೀಕ್ಷೆಯನ್ನು ನಡೆಸಲಾಗುತ್ತದೆ.

**ಡಾ. ಹಾ.ಮಾ. ನಾಯಕರು**

*ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನೊಳಗೊಂಡ ಕರಾವಳಿ ಪ್ರದೇಶ ತುಳುನಾಡು. ವಿವಿಧ ಜಾತಿ, ಮತ, ಧರ್ಮ, ಭಾಷೆ, ಸಾಹಿತ್ಯಗಳ ಆಡುಂಬೊಲವಾಗಿದ್ದು, ಬಹುಮುಖಿ ಸಂಸ್ಕೃತಿಯ ಸಮನ್ವಯದ ನೆಲೆಬೀಡು; ಸಂಶೋಧನೆಗೆ ಫಲವತ್ತಾದ ನೆಲ.*

*ಈ ಹಿನ್ನೆಲೆಯಲ್ಲಿ ಇಲ್ಲಿನ ಸಾಂಸ್ಕೃತಿಕ ಸಂಪತ್ತಿನ ಸಂರಕ್ಷಣೆಯ ಎಚ್ಚರಿಕೆಯನ್ನು ಗಮನದಲ್ಲಿಟ್ಟುಕೊಂಡು, ಪೂರಕವಾಗಿ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಮಾನ್ಯತೆಯನ್ನು ಪಡೆದು ಡಾ. ಹಾಮಾನಾ ಸಂಶೋಧನ ಕೇಂದ್ರವನ್ನು ಸ್ಥಾಪಿಸಲಾಗಿದೆ. ಗ್ರಾಮೀಣ ಪರಿಸರದ ಸಂಶೋಧನಾಸಕ್ತ ವಿದ್ಯಾರ್ಥಿಗಳಿಗೆ ಈ ಕೇಂದ್ರದ ಮೂಲಕ ಎಂ. ಫಿಲ್./ಪಿಎಚ್. ಡಿ. ಪದವಿ ಅಧ್ಯಯನಗಳನ್ನು ನಡೆಸಲು ಅವಕಾಶ ಮಾಡಲಾಗಿದೆ.*

*ಡಾ. ಹಾರೋಗದ್ದೆ ಮಾನಪ್ಪ ನಾಯಕ ಅವರು ಕನ್ನಡ ಸಾಹಿತ್ಯದಲ್ಲಿ ವಿಶೇಷ ಸಾಧನೆಗೈದವರು. ತಮ್ಮ ಜೀವಿತಾವಧಿಯಲ್ಲಿ ೨೪೬೮೦ ಪುಸ್ತಕಗಳನ್ನು ಸಂಗ್ರಹಿಸಿದ್ದರು. ಈ ಸಂಗ್ರಹವನ್ನು ತನ್ನ ಮರಣಾನಂತರ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ| ಡಿ. ವೀರೇಂದ್ರ ಹೆಗ್ಗಡೆಯವರಿಗೆ ಹಸ್ತಾಂತರಿಸಬೇಕೆಂದು 'ವಿಲ್' ಬರೆಸಿದ್ದರು. ಇದು ನಾಯಕರಿಗೆ ಧರ್ಮಸ್ಥಳದ ಮೇಲಿರುವ ಗೌರವ ಶ್ರದ್ಧೆಗಳ ಪ್ರತೀಕ.*

*ಡಾ. ಹಾಮಾನಾ ಅವರ ಸದಿಚ್ಛೆಯಂತೆ ಅವರ ಮರಣಾನಂತರ ಅವರ ಕುಟುಂಬದವರು ಆ ಪುಸ್ತಕ ರಾಶಿಯನ್ನು ಡಾ| ಡಿ. ವೀರೇಂದ್ರ ಹೆಗ್ಗಡೆಯವರಿಗೆ ಹಸ್ತಾಂತರಿಸಿದ್ದಾರೆ. ಶ್ರೀ ಧ. ಮಂ. ಎಜ್ಯುಕೇಶನಲ್ ಸೊಸೈಟಿ (ರಿ.) ಯ ಅಧ್ಯಕ್ಷರೂ ಆಗಿರುವ ಪೂಜ್ಯ ಶ್ರೀ ಹೆಗ್ಗಡೆಯವರು ಆ ಗ್ರಂಥ ಭಂಡಾರವನ್ನು ವಿದ್ಯಾರ್ಥಿಗಳಿಗೆ ಮತ್ತು ಅಧ್ಯಯನಾಸಕ್ತರಿಗೆ ಅನುಕೂಲವಾಗಲೆಂದು ಉಜಿರೆ ಶ್ರೀ ಧ. ಮಂ. ಕಾಲೇಜಿಗೆ ವರ್ಗಾಯಿಸಿರುತ್ತಾರೆ.*

*ಈ ಹಿನ್ನೆಲೆಯಲ್ಲಿ ಡಾ. ಹಾಮಾನಾಯಕರ ಉದಾರ ಕೊಡುಗೆಯ ಸ್ಮರಣಾರ್ಥವಾಗಿ ಡಾ. ಹಾಮಾನಾ ಸಂಶೋಧನ ಕೇಂದ್ರ ರೂಪುಗೊಂಡಿದೆ.*

## ಎಂ. ಫಿಲ್. ಮತ್ತು ಪಿಎಚ್. ಡಿ. ಅಧ್ಯಯನ ಕೈಗೊಳ್ಳುವ ವಿಭಾಗಗಳು

| | | |
|---|---|---|
| ೧. | ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ | - ಕನ್ನಡ ಸಾಹಿತ್ಯ ಅಧ್ಯಯನ |
| ೨. | ಕನ್ನಡ ಭಾಷಾ ಅಧ್ಯಯನ ವಿಭಾಗ | - ಕನ್ನಡ ಭಾಷಾ ಅಧ್ಯಯನ |
| ೩. | ಭಾಷಾಂತರ ಅಧ್ಯಯನ ವಿಭಾಗ | - ಭಾಷಾಂತರ ಅಧ್ಯಯನ, ತೌಲನಿಕ ಸಾಹಿತ್ಯ ಅಧ್ಯಯನ |
| ೪. | ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ | - ದ್ರಾವಿಡ ಸಂಸ್ಕೃತಿ ಅಧ್ಯಯನ |
| ೫. | ಮಹಿಳಾ ಅಧ್ಯಯನ ವಿಭಾಗ | - ಮಹಿಳಾ ಸಾಹಿತ್ಯ ಸಂಸ್ಕೃತಿ ಅಧ್ಯಯನ |
| ೬. | ಹಸ್ತಪ್ರತಿ ಶಾಸ್ತ್ರ ವಿಭಾಗ | - ಹಸ್ತಪ್ರತಿ ಶಾಸ್ತ್ರ |

**ಮಾರ್ಗದರ್ಶಕರು**

ಡಾ. ಎಸ್.ಡಿ. ಶೆಟ್ಟಿ
ಡಾ. ಬಿ. ಪಿ. ಸಂಪತ್‌ಕುಮಾರ್
ಡಾ. ವಸಂತ ಕುಮಾರ್ ತಾಳ್ತಜೆ
ಡಾ. ಸತ್ಯನಾರಾಯಣ ಮಲ್ಲಿಪಟ್ಟಣ
ಡಾ. ಈ. ಮಹಾಬಲ ಭಟ್ಟ
ಡಾ. ಎಚ್. ಮಾಧವ ಭಟ್
ಡಾ. ಎಚ್. ಜಿ. ಶ್ರೀಧರ್

೧. ಚರಿತ್ರೆ ವಿಭಾಗ **ಮಾರ್ಗದರ್ಶಕರು**

ಡಾ. ವೈ. ಉಮಾನಾಥ ಶೆಣೈ
ಡಾ. ಎಲ್. ಎನ್. ಸ್ವಾಮಿ

೨. ಅಭಿವೃದ್ಧಿ ಅಧ್ಯಯನ ವಿಭಾಗ **ಮಾರ್ಗದರ್ಶಕರು**

ಡಾ. ಪ್ರಭಾಕರ ಶಿಶಿಲ
ಡಾ. ಎ. ಜಯಕುಮಾರ್ ಶೆಟ್ಟಿ
ಡಾ. ಬಿ. ಚಂದ್ರಶೇಖರ ದಾಮ್ಲೆ

# ಎಂ. ಫಿಲ್. ಪದವಿ ನಿಯಮಾವಳಿ

## ೧. ಪ್ರವೇಶಾರ್ಹತೆ

ಅ. ಆಯಾಯ ವಿಭಾಗಗಳು ನಿಗದಿಪಡಿಸಿದ ವಿಷಯಗಳಲ್ಲಿ ಶೇ. ೫೫ ಅಂಕಗಳೊಡನೆ ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಪಾಸಾಗಿರಬೇಕು. ಪರಿಶಿಷ್ಟ ಜಾತಿ / ಪಂಗಡದ ವಿದ್ಯಾರ್ಥಿಗಳಿಗೆ ಜಾರಿಯಲ್ಲಿರುವ ನಿಯಮಾನುಸಾರ ಕನಿಷ್ಠ ಅಂಕ ಮಿತಿಯಲ್ಲಿ ವಿನಾಯಿತಿ ಇರುತ್ತದೆ.

ಆ. ದಿನಾಂಕ ೩೧-೦೩-೧೯೯೨ಕ್ಕೆ ಮೊದಲು ನೇಮಕಗೊಂಡಿದ್ದು, ನಿಯಮಿತ ಖಾಯಂ ಸೇವೆಯಲ್ಲಿರುವ ಪದವಿ ಕಾಲೇಜುಗಳ ಅಧ್ಯಾಪಕರು ಸ್ನಾತಕೋತ್ತರ ಪದವಿಯಲ್ಲಿ ಶೇ. ೫೦ ಅಂಕ ಪಡೆದಿದ್ದರೆ ಅವರು ನೋಂದಣಿಗೆ ಅರ್ಹರಾಗುತ್ತಾರೆ. ಆದರೆ ಅವರು ಮೂರು ತಿಂಗಳುಗಳ ಕಾಲ ಕಡ್ಡಾಯವಾಗಿ ವಿಶ್ವವಿದ್ಯಾಲಯದಲ್ಲಿ ನಡೆಸಲಾಗುವ ತರಗತಿಗಳಿಗೆ ಹಾಜರಾಗಬೇಕು.

## ೨. ಅರ್ಜಿ ಆಹ್ವಾನ ಮತ್ತು ಪ್ರವೇಶ ಪರೀಕ್ಷೆ

ವಿ.ವಿ. ದ ನಿರ್ದೇಶನದ ಮೇರೆಗೆ ಸಾಮಾನ್ಯವಾಗಿ ಪ್ರತಿ ವರ್ಷ ಜುಲೈ ಇಲ್ಲವೇ ಆಗಸ್ಟ್ ತಿಂಗಳಲ್ಲಿ ಅರ್ಜಿ ಆಹ್ವಾನಿಸಲಾಗುತ್ತದೆ. ಅಭ್ಯರ್ಥಿಗಳು ನೀಡುವ ಅರ್ಜಿಗಳನ್ನು ಪರಿಶೀಲಿಸಿ ಪ್ರವೇಶಾರ್ಹತೆ ಪಡೆದ ವಿದ್ಯಾರ್ಥಿಗಳಿಗೆ ಕೇಂದ್ರವು ಪ್ರವೇಶ ಪರೀಕ್ಷೆಗಳನ್ನು ನಡೆಸುತ್ತದೆ. ಸ್ನಾತಕೋತ್ತರ ಪರೀಕ್ಷೆಯ ಅಂಕಗಳು

ಮತ್ತು ಪ್ರವೇಶ ಪರೀಕ್ಷೆಗಳ ಅಂಕಗಳನ್ನು ಸಮಪ್ರಮಾಣದಲ್ಲಿ ಕೂಡಿಸಿ ಆದ್ಯತಾನುಸಾರ ಪಟ್ಟಿಯನ್ನು ಸಿದ್ಧಪಡಿಸಿ ಮೀಸಲಾತಿ ನಿಯಮಗಳಿಗನುಗುಣವಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಈ ಪರೀಕ್ಷೆಯಲ್ಲಿ ಲಿಖಿತ ಮತ್ತು ಮೌಖಿಕವೆಂಬ ಎರಡು ಬಗೆಯ ಪರೀಕ್ಷಾ ವಿಧಾನಗಳಿರುತ್ತವೆ. ಆಯ್ಕೆಗಾಗಿ ಕನಿಷ್ಠ ೫೫ ಅಂಕಗಳನ್ನು ಪಡೆಯಬೇಕಾಗುತ್ತದೆ.

## ೩. ಅಧ್ಯಯನಾವಧಿ

ಎಂ. ಫಿಲ್. ಅಧ್ಯಯನದ ಅವಧಿ ಒಂದು ವರ್ಷ. ಮೊದಲ ಮೂರು ತಿಂಗಳು ಪಠ್ಯ ಕ್ರಮಾನುಸಾರ ಅಧ್ಯಯನ. ಅನಂತರ ಒಂಬತ್ತು ತಿಂಗಳು ನಿಬಂಧ ಸಿದ್ಧತೆ ಮತ್ತು ಸಲ್ಲಿಕೆ.

## ೪. ಅಧ್ಯಯನ ಕ್ರಮ

ಪಠ್ಯಕ್ರಮದಲ್ಲಿ ೪ ಪತ್ರಿಕೆಗಳಿರುತ್ತವೆ. ಪ್ರತಿ ಪತ್ರಿಕೆಗೂ ಗರಿಷ್ಠ ೧೦೦ ಅಂಕಗಳು. ೮೦ ಅಂಕಗಳಿಗೆ ಲಿಖಿತ ಪರೀಕ್ಷೆ ನಡೆಸಲಾಗುತ್ತದೆ. ೧೫ ಅಂಕಗಳು ಆಂತರಿಕ ಮೌಲ್ಯ ಮಾಪನಕ್ಕಾಗಿ ಇರುತ್ತವೆ. ಆಂತರಿಕ ಮೌಲ್ಯ ಮಾಪನಕ್ಕಾಗಿ ವಿದ್ಯಾರ್ಥಿಗಳು ಸಂಶೋಧನ ಲೇಖನ ಬರೆಯುವುದು, ಚರ್ಚೆ ನಡೆಸುವುದು ಮುಂತಾದ ಶೈಕ್ಷಣಿಕ ಚಟುವಟಿಕೆಗಳಲ್ಲಿ  ಭಾಗಿಯಾಗಬೇಕಾಗುತ್ತದೆ. ನಾಲ್ಕು ಪತ್ರಿಕೆಗಳಿಗೂ ಸೇರಿ ಒಟ್ಟಾಗಿ ೨೦ ಅಂಕಗಳಿಗೆ ಒಂದು ಮೌಖಿಕ ಪರೀಕ್ಷೆ ಇರುತ್ತದೆ. ಈ ಅಂಕಗಳನ್ನು ಸರಾಸರಿ ತೆಗೆದು ನಾಲ್ಕು ಪತ್ರಿಕೆಗಳಿಗೂ ಸೇರಿಸಲಾಗುವುದು. ಮೂರು ತಿಂಗಳ ನಂತರ ನಡೆಯುವ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಕನಿಷ್ಠ ಶೇ. ೫೫ ಅಂಕಗಳನ್ನು ಪಡೆದು ಉತ್ತೀರ್ಣರಾಗಬೇಕು. ಅನುತ್ತೀರ್ಣರಾದಲ್ಲಿ ಮುಂದಿನ ಒಂದು ತಿಂಗಳೊಳಗೆ ಅನುತ್ತೀರ್ಣ ಪತ್ರಿಕೆಯಲ್ಲಿ ಮರುಪರೀಕ್ಷೆ ಬರೆಯಬೇಕು. ಮರುಪರೀಕ್ಷೆಯಲ್ಲಿಯೂ ವಿದ್ಯಾರ್ಥಿಯು ಅನುತ್ತೀರ್ಣರಾದರೆ ನಿಬಂಧ ರಚನೆಗೆ ಅವಕಾಶ ನೀಡುವುದಿಲ್ಲ. ಅವರು ಎಂ. ಫಿಲ್. ಪದವಿ ಅಭ್ಯಾಸದಿಂದ ಹೊರಗುಳಿಯುತ್ತಾರೆ.

## ೫. ನಿಬಂಧ ರಚನೆ

ಕೇಂದ್ರದ ಮಾರ್ಗದರ್ಶಕರ ನೇತೃತ್ವದಲ್ಲಿ ವಿದ್ಯಾರ್ಥಿಯು ಅಧ್ಯಯನ ನಿಬಂಧವನ್ನು ಸಿದ್ಧಪಡಿಸಿ ಕೇಂದ್ರಕ್ಕೆ ಸಲ್ಲಿಸಬೇಕು. ನಿಬಂಧದ ಐದು ಪ್ರತಿಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಅನಂತರ ಇವುಗಳನ್ನು ಕೇಂದ್ರವು ಅಧ್ಯಯನಾಂಗಕ್ಕೆ ಕಳುಹಿಸುತ್ತದೆ. ಮಾರ್ಗದರ್ಶಕರೂ ಸೇರಿದಂತೆ ಮೂವರು ವಿದ್ವಾಂಸರು ಮೌಲ್ಯ ಮಾಪನ ಮಾಡುತ್ತಾರೆ. ಈ ಮೂವರು ಮೌಲ್ಯಮಾಪಕರ ಅಂಕಗಳ ಸರಾಸರಿ ತೆಗೆದು ಅಂಕಗಳನ್ನು ಪರಿಗಣಿಸಲಾಗುತ್ತದೆ. ಮೌಲ್ಯ ಮಾಪಕರು ಗರಿಷ್ಠ ೧೦೦ ಅಂಕಗಳಿಗೆ ನಿಬಂಧವನ್ನು ಮೌಲ್ಯಮಾಪನ ಮಾಡುತ್ತಾರೆ.

ನಿಬಂಧವು ಎ ೪ ಆಕಾರದಲ್ಲಿರಬೇಕು. ಅಕ್ಷರದ ಗಾತ್ರ ೧೪ ಪಾಯಿಂಟ್ ಮತ್ತು ಪ್ರತಿ ಪುಟಕ್ಕೆ ಕನಿಷ್ಠ ೩೦ ಸಾಲುಗಳು ಇರಬೇಕು. ೨೩ ಸೆಂ. ಮೀ. ಉದ್ದ ೧೩ ಸೆಂ. ಮೀ. ಅಗಲದಲ್ಲಿ ಡಿ. ಟಿ. ಪಿ. ಮಾಡಿರಬೇಕು. ಪುಟ ಸಂಖ್ಯೆ ೮೦ ರಿಂದ ೧೦೦ ರವರೆಗೆ ಇರಬೇಕು. ಅರಿಕೆ, ಅರ್ಪಣೆ, ಕೃತಜ್ಞತೆ ಪುಟಗಳಿರಬಾರದು. ಮಾರ್ಗದರ್ಶಕರ ಮತ್ತು ಅಭ್ಯರ್ಥಿಯ ದೃಢೀಕರಣವಿರಬೇಕು. ಅಡಿಟಿಪ್ಪಣಿ, ಪರಾಮರ್ಶನ ಗ್ರಂಥಗಳ ಪಟ್ಟಿ,

ಅನುಬಂಧಗಳು ಇರಬಹುದು. ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ. ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ ಎಂದು ನಮೂದಿಸಬೇಕು. ಅಭ್ಯರ್ಥಿಯು ತನ್ನ ಸ್ನಾತಕೋತ್ತರ ಪದವಿಯಲ್ಲಿ ಅಧ್ಯಯನ ಮಾಡಿರುವ ವಿಷಯ ಯಾವುದೇ ಇರಬಹುದು. ಅವರು ಯಾವ ವಿಭಾಗದಲ್ಲಿ ಎಂ. ಫಿಲ್. ಅಧ್ಯಯನಕ್ಕೆ ನೋಂದಣಿ ಮಾಡಿರುತ್ತಾರೆಯೋ ಆ ವಿಭಾಗದ ಪದವಿಯನ್ನು ಮಾತ್ರ ಪಡೆಯುತ್ತಾರೆ.

## ೬. ಶುಲ್ಕಗಳು

ಪ್ರವೇಶ ಶುಲ್ಕ, ಅಧ್ಯಯನ ಶುಲ್ಕ ಮತ್ತು ಪರೀಕ್ಷಾ ಶುಲ್ಕಗಳು ವಿಶ್ವವಿದ್ಯಾಲಯವು ನಿಗದಿ ಮಾಡಿದಂತೆ ಇರುತ್ತವೆ. ಕೇಂದ್ರದ ಅಭಿವೃದ್ಧಿ ಶುಲ್ಕವನ್ನು ವಿ. ವಿ. ದ ಸೂಚನೆಯಂತೆ ನಿಗದಿಗೊಳಿಸಿ ಪಡೆಯಲಾಗುತ್ತದೆ.

ಪ. ಜಾ., ಪ. ಪಂ., ಪ್ರ. ೧ರ ಅಭ್ಯರ್ಥಿಗಳಿಗೆ ವಿ. ವಿ. ದ ನಿಯಮಾನುಸಾರ ಶೇ. ೫೦ ಶುಲ್ಕ ವಿನಾಯಿತಿ ಇರುತ್ತದೆ.

ಶುಲ್ಕಗಳನ್ನು ವಿ. ವಿ. ವು ಕಾಲದಿಂದ ಕಾಲಕ್ಕೆ ಪರಿಷ್ಕರಿಸಬಹುದಾಗಿದೆ.

## ೭. ಪಠ್ಯಕ್ರಮ

ಎಂ. ಫಿಲ್. ಶೈಕ್ಷಣಿಕ ಕಾರ್ಯಕ್ರಮ, ಬೋಧನೆಗಳನ್ನು ಕನ್ನಡ ವಿಶ್ವವಿದ್ಯಾಲಯವು ನಿಗದಿಪಡಿಸಿ ಒದಗಿಸುವ ಪಠ್ಯಕ್ರಮದ ಅನುಸಾರವಾಗಿಯೇ ನಡೆಸಲಾಗುತ್ತದೆ. ಪ್ರತಿಯೊಂದು ವಿಷಯಕ್ಕೂ ಪ್ರತ್ಯೇಕ ತರಗತಿ ಮತ್ತು ಪರೀಕ್ಷೆಗಳನ್ನು ನಡೆಸಲಾಗುತ್ತದೆ.

# ಡಾ. ಹಾಮಾನಾ ಗ್ರಂಥಾಲಯ

- ಸಾಕಷ್ಟು ಸ್ಥಳಾವಕಾಶ ಮತ್ತು ಬೆಳಕಿನ ವ್ಯವಸ್ಥೆಯಿರುವ ಪ್ರತ್ಯೇಕ ಕೊಠಡಿ ಸೌಲಭ್ಯ
- ಸುಮಾರು ಇಪ್ಪತ್ತೇಳು ಸಾವಿರ ವಿವಿಧ ವಿಷಯಗಳಿಗೆ ಸಂಬಂಧಿಸಿದ ಗ್ರಂಥಗಳ ವಿಶೇಷ ಸಂಗ್ರಹ
- ರಂ. ಶ್ರೀ ಮುಗಳಿಯವರ ೧೪೫೨ ಪುಸ್ತಕಗಳ ಸಂಗ್ರಹ
- ಬೃಹತ್ ಜನರಲ್ ಲೈಬ್ರರಿ - ಸುಮಾರು ಮೂವತ್ತಾರು ಸಾವಿರ ಗ್ರಂಥಗಳು

*ವಿ. ಸೂ.:* ಡಾ. ಹಾಮಾನಾ ಮತ್ತು ರಂ. ಶ್ರೀ ಮುಗಳಿಯವರ ಸಂಗ್ರಹಗಳು ಕೇವಲ ಪರಾಮರ್ಶನಕ್ಕಾಗಿ ಮಾತ್ರ. ಸೇರ್ಪಡೆಗೊಂಡ ಇತರ ಪುಸ್ತಕಗಳನ್ನು ಮತ್ತು ಜನರಲ್ ಲೈಬ್ರರಿಯ ಗ್ರಂಥಗಳನ್ನು ಹೆಚ್ಚಿನ ಅಧ್ಯಯನಕ್ಕಾಗಿ ಮನೆಗೆ ಕೊಂಡೊಯ್ಯಲು ಅವಕಾಶವಿದೆ.

- **ಅನುಭವಿ ಮಾರ್ಗದರ್ಶಕರು**
- **ಇಬ್ಬರು ಪಿಎಚ್. ಡಿ. ಅಭ್ಯರ್ಥಿಗಳಿಗೆ ವಿದ್ಯಾರ್ಥಿ ವೇತನ ಸೌಲಭ್ಯ**

  ಕನ್ನಡ ನಾಡು ನುಡಿ ಕಲೆ ಸಾಹಿತ್ಯ ಸಂಸ್ಕೃತಿ ಎಂದರೆ ಡಾ। ಡಿ. ವೀರೇಂದ್ರ ಹೆಗ್ಗಡೆಯವರಿಗೆ ವಿಶೇಷ ಅಭಿಮಾನ. ಆದ್ದರಿಂದ ಅವರು ಕನ್ನಡ ಸಾಹಿತ್ಯ ಸಂಸ್ಕೃತಿ ವಿಷಯಗಳ ಮೇಲೆ ಅಧ್ಯಯನ ಮಾಡಬಯಸುವ ಇಬ್ಬರು ವಿದ್ಯಾರ್ಥಿಗಳಿಗೆ ಮೂರುವರ್ಷಗಳ ಕಾಲ ವಿದ್ಯಾರ್ಥಿವೇತನ ನೀಡಲು ಅನುಮತಿ ನೀಡಿರುತ್ತಾರೆ.

- **ಮಾಹಿತಿ ಸಂಗ್ರಹಕ್ಕಾಗಿ**
- ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ ಧರ್ಮಸ್ಥಳ :
  ಅಮೂಲ್ಯವಾದ ಪ್ರಾಚೀನ ತಾಡೋಲೆ, ಕೈಬರಹ, ಕಡತ, ದಾಖಲೆ (ಹಸ್ತಪ್ರತಿಗಳು) ಮುಂತಾದ ವಿಶೇಷ ಸಂಗ್ರಹ.
- ಮಂಜೂಷಾ ವಸ್ತು ಸಂಗ್ರಹಾಲಯ - ಧರ್ಮಸ್ಥಳ :
  ಕರ್ನಾಟಕ ಸಂಸ್ಕೃತಿಗೆ ಸಂಬಂಧಿಸಿದ ಪ್ರಾಚ್ಯ ವಸ್ತುಗಳ ಸಂಗ್ರಹ, ಗೃಹಬಳಕೆ ವಸ್ತುಗಳು, ಜಾನಪದ, ಮೂರ್ತಿಶಿಲ್ಪ, ಶಾಸನ, ನಾಣ್ಯ, ಆಭರಣ, ಆಯುಧ, ಚಿತ್ರ ಮುಂತಾದವುಗಳ ಅಮೂಲ್ಯ ಸಂಗ್ರಹ.

********